145ನೇ ಅಧಿವೇಶನ
ನಿ-330
ಕ್ರ-33

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ನಿಯಮ-330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಹೇಳಿಕೆ.**

**ಸೂಚನೆ:-**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಾಡಪ್ರಭು ಕೆಂಪೇಗೌಡ ಬಡಾವಣೆ ರಚಿಸಲು ಉದ್ದೇಶಿಸಿ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಬರುವ ಕೊಮ್ಮಘಟ್ಟ ಗ್ರಾಮದಲ್ಲಿ 721 ಎಕರೆ 34 ಗುಂಟೆ, ಭೀಮನಕುಪ್ಪೆ ಗ್ರಾಮದಲ್ಲಿ 833 ಎಕರೆ 25 ಗುಂಟೆ, ಭೀಮನಕುಪ್ಪೆ-ರಾಮಸಂದ್ರದಲ್ಲಿ 40 ಎಕರೆ 27 ಗುಂಟೆ, ಸೂಲಿಕೆರೆ ಗ್ರಾಮದಲ್ಲಿ 318 ಎಕರೆ 14 ಗುಂಟೆ, ಕೆಂಚನಪುರ ಗ್ರಾಮದಲ್ಲಿ 250 ಎಕರೆ 38 ಗುಂಟೆ, ರಾಮಸಂದ್ರ ಗ್ರಾಮದಲ್ಲಿ 391 ಎಕರೆ 14 ಗುಂಟೆ, ಕೊಮ್ಮಘಟ್ಟ-ಕೆ.ಕೃಷ್ಣಸಾಗರ ಗ್ರಾಮದ 154 ಎಕರೆ 12 ಗುಂಟೆ ಮತ್ತು ಚಲ್ಲಘಟ್ಟ ಗ್ರಾಮದಲ್ಲಿ 328 ಎಕರೆ 03 ಗುಂಟೆ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬರುವ ಸೀಗೇಹಳ್ಳಿ ಗ್ರಾಮದಲ್ಲಿ 99 ಎಕರೆ 38 ಗುಂಟೆ, ಕನ್ನಲ್ಲಿ ಗ್ರಾಮದಲ್ಲಿ 413 ಎಕರೆ 13 ಗುಂಟೆ, ಕೊಡಿಗೇಹಳ್ಳಿ ಗ್ರಾಮದಲ್ಲಿ 453 ಎಕರೆ 25 ಗುಂಟೆ ಮತ್ತು ಮಂಗನಹಳ್ಳಿ ಗ್ರಾಮದಲ್ಲಿ 37 ಎಕರೆ 24 ಗುಂಟೆ ಒಟ್ಟಾರೆಯಾಗಿ 4043 ಎಕರೆ 27 ಗುಂಟೆ ಜಮಿನುಗಳನ್ನು ರಸ್ತೆ ಮತ್ತು ನಿವೇಶನಗಳನ್ನು ರಚಿಸಲು ದಿನಾಂಕ:18/02/2010 ರಂದು ಭೂಸ್ವಾಧೀನಪಡಿಸಿಕೊಳ್ಳಲು ನಂ. ಯುಡಿಡಿ/51/ಎಂಎನ್ಎಕ್ಸ್/2010 ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವುದಕ್ಕೆ ಉದ್ದೇಶಿತ ಫೆರಿಫೆರಲ್ ರಸ್ತೆಗಾಗಿ ಬೆಂಗಳೂರು ದಕ್ಷಿಣ ಮತ್ತು ಉತ್ತರ ತಾಲ್ಲೂಕಿನ ಕೆಲವು ಜಮೀನುಗಳನ್ನು ಅಂತಿಮ ಅಧಿಸೂಚನೆ ಸಂಖ್ಯೆ: ಯುಡಿಡಿ/399/ಎಂಎನ್ಎಕ್ಸ್/2006 ದಿನಾಂಕ:29/01/2007 ಅಧಿಸೂಚನೆಯನ್ನು ಹೊರಡಿಸಿ, ನಂತರ ಉದ್ದೇಶಿತ ಅಳತೆಯ ರಸ್ತೆಯು ಕಿರಿದು ಮಾಡಿ ರಸ್ತೆಯು ಇಕ್ಕೆಲಗಳಲ್ಲಿ ನಿವೇಶನಗಳನ್ನು ರಚಿಸುತ್ತಿದ್ದು, ಭೂ ಸ್ವಾಧೀನದಿಂದ ಹೊರತುಪಡಿಸಿದ ಜಮೀನುಗಳಿಗೆ ರಸ್ತೆ ಸಂಪರ್ಕವಿಲ್ಲದಂತಾಗಿರುತ್ತದೆ. ಈ ಯೋಜನೆಯಲ್ಲಿಯೂ ಸಹ ಭೂ ಸ್ವಾಧೀನದಿಂದ ಉಳಿದ ಜಮೀನುಗಳಿಗೆ ವಿಸ್ತಾರವಾದ ರಸ್ತೆಯ ಸಂಪರ್ಕವಿದ್ದ ಜಮೀನುಗಳಿಗೆ ಒಳ್ಳೆಯ ಮಾರುಕಟ್ಟೆ ಬೆಲೆ ಬರುವುದೆಂದು ತಿಳಿದು ಪ್ರಾಧಿಕಾರದ ಭೂ ಸ್ವಾಧೀನ ಪ್ರಕ್ರಿಯೆಗಳಿಗೆ ಯಾವುದೇ ತಂಟೆ ತಕರಾರು ಮಾಡದೇ ತಮ್ಮ ಸ್ವ ಇಚ್ಛೆಯಿಂದ ಜಮೀನುಗಳನ್ನು ಬಿಟ್ಟುಕೊಟ್ಟಿರುತ್ತಾರೆ. ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಯಾವ ಉದ್ದೇಶಕ್ಕೆ ಭೂ ಸ್ವಾಧೀನಪಡಿಸಿಕೊಂಡಿರುತ್ತಾರೆಯೋ ಅದೇ ಉದ್ದೇಶಕ್ಕೆ ಬಳಸಿಕೊಳ್ಳದೇ ಮೂಲ ಉದ್ದೇಶವನ್ನು ರೈತರಿಗೆ ಮರೆಮಾಚಿ ಮತ್ತು (Land Zonal Resolution) ಉಲ್ಲಂಘನೆ ಮಾಡಿ ರಸ್ತೆಯ ಇಕ್ಕೆಲಗಳಲ್ಲಿ ನಿವೇಶನಗಳನ್ನು ರಚಿಸುತ್ತಿರುವ ಬಗ್ಗೆ.

**ಹೇಳಿಕೆ:-**

ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸಲು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿಯ 4 ಗ್ರಾಮಗಳಾದ ಶೀಗೆಹಳ್ಳಿ, ಕೊಡಿಗೇಹಳ್ಳಿ, ಕನ್ನಲ್ಲಿ, ಮಂಗನಹಳ್ಳಿ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿಯ 8 ಗ್ರಾಮಗಳಾದ ಕೊಮ್ಮಘಟ್ಟ, ಭೀಮನಕುಪ್ಪೆ, ಭೀಮನಕುಪ್ಪೆ ರಾಮಸಾಗರ, ಸೂಲಿಕೆರೆ, ಕೆಂಚನಪುರ, ರಾಮಸಂದ್ರ, ಕೊಮ್ಮಘಟ್ಟ ಕೃಷ್ಣಸಾಗರ ಹಾಗೂ ಚೆಲ್ಲಘಟ್ಟ **ಒಟ್ಟು 12** ಗ್ರಾಮಗಳಲ್ಲಿ **4043 ಎಕರೆ 27** ಗುಂಟೆ ಜಮೀನಿನಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಮಾಡಲು ಸರ್ಕಾರಿ ಆದೇಶದ ಸಂಖ್ಯೆ: **UDD/51/MNX/2010 ದಿನಾಂಕ: 18/02/2010** ರನ್ವಯ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ, 39401 ವಿವಿಧ ಅಳತೆಗಳ ನಿವೇಶನಗಳನ್ನು ರಚಿಸಿ ಹಂಚಲು ಯೋಜಿಸಲಾಗಿರುತ್ತದೆ.

ಒಟ್ಟು **39401** ಸಂಖ್ಯೆಯ ನಿವೇಶನಗಳಲ್ಲಿ ಬಡಾವಣೆಯ ಭೂಮಾಲೀಕರಿಗೆ 40:60 ಅನುಪಾತದಡಿಯಲ್ಲಿ ಭೂಪರಿಹಾರವಾಗಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಿ, ಉಳಿಕೆ ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲು ಉದ್ದೇಶಿಸಿ, ಕಾಮಗಾರಿಯನ್ನು **ಮಾರ್ಚ್-2014** ರಲ್ಲಿ ಪ್ರಾರಂಭಿಸಲಾಗಿರುತ್ತದೆ.

ಬಡಾವಣೆಯನ್ನು ನಿರ್ಮಿಸಲು ಪ್ರಾರಂಭದಿಂದ ಪ್ರಸ್ತುತದವರೆಗೆ ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಿರುವ ಒಟ್ಟು **2670 ಎಕರೆ 03** ಗುಂಟೆ ಜಮೀನಿನ ಪೈಕಿ **2189 ಎಕರೆ 32 ಗುಂಟೆ** ಜಮೀನುಗಳಲ್ಲಿ ವಿವಿಧ ಅಳತೆಯ ಒಟ್ಟು **26902** ನಿವೇಶನಗಳನ್ನು ರಚಿಸಲಾಗಿರುತ್ತದೆ. ಇದರಲ್ಲಿ **3421** ಮೂಲೆ ನಿವೇಶನಗಳು ಮತ್ತು **23481** ಮಧ್ಯಂತರ ನಿವೇಶನಗಳಾಗಿರುತ್ತದೆ.

- ಸಾರ್ವಜನಿಕರಿಗೆ ಮೊದಲನೇ ಹಂತದಲ್ಲಿ **5000** ನಿವೇಶನಗಳು ಹಾಗೂ ಎರಡನೇ ಹಂತದಲ್ಲಿ **4971** ನಿವೇಶನಗಳು ವಿವಿಧ ಅಳತೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
- ಭೂಮಾಲೀಕರಿಗೆ 40:60 ಅನುಪಾತದಡಿಯಲ್ಲಿ ಮೊದಲನೇ ಹಂತದಲ್ಲಿ **2157** ನಿವೇಶನಗಳು ಹಾಗೂ ಎರಡನೇ ಹಂತದಲ್ಲಿ ಇಲ್ಲಿಯವರೆವಿಗೆ **8758** ನಿವೇಶನಗಳು ವಿವಿಧ ಅಳತೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಉಳಿಕೆ ನಿವೇಶನಗಳನ್ನು ಮುಖ್ಯ ಸಂಪರ್ಕ ರಸ್ತೆಗೆ ಜಮೀನು ಬಿಟ್ಟುಕೊಟ್ಟಿರುವ ಭೂಮಾಲೀಕರಿಗೆ 50:50 ಅನುಪಾತದಲ್ಲಿ ಹಾಗೂ ಅರ್ಕಾವತಿ ಬಡಾವಣೆ ನಿವೇಶನದಾರರಿಗೆ ಬದಲಿ ನಿವೇಶನವಾಗಿ ಹಂಚಿಕೆ ಮಾಡಲಾಗಿರುತ್ತದೆ.

ಅಂತಿಮ ಅಧಿಸೂಚನೆಯಂತೆ 4043 ಎಕರೆ 27 ಗುಂಟೆಗೆ ನಗರ ಯೋಜನಾ ವಿಭಾಗದಿಂದ ಅನುಮೋದನೆಯಾಗಿರುವ ನಕ್ಷೆಯಂತೆ ಬಡಾವಣೆಯನ್ನು ರಚಿಸಲಾಗುತ್ತಿದೆ.

ಮಾಗಡಿ ರಸ್ತೆಯಿಂದ ಮೈಸೂರು ರಸ್ತೆ ವರೆಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಖಾಂತರ ಹಾದು ಹೋಗುವ ಮುಖ್ಯ ಸಂಪರ್ಕ ರಸ್ತೆ ನಿರ್ಮಾಣದ ಉದ್ದೇಶಕ್ಕಾಗಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ:BDA/Commr/DC(LA)/SLAO/115/2005-06 dated 12/12/2005 & Karnataka Gazette dated 16/11/2006 in Part III at Page 1 to 56 vide Preliminary Notification No.BDA/Comm/DC(LA)SALAO/80/2006-07 dt:15/11/2006 ರಲ್ಲಿ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:UDD/169/MNX/2011, Dt:27/07/2011 ರಲ್ಲಿ 321 ಎಕರೆ 10 ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ, ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯು 100.00 ಮೀ ಅಗಲದ ಮುಖ್ಯ ಸಂಪರ್ಕ ರಸ್ತೆಯಾಗಿದ್ದು, ರಸ್ತೆ ನಿರ್ಮಾಣಕ್ಕಾಗಿ ಇದುವರೆವಿಗೂ 181 ಎಕರೆ 21 ಗುಂಟೆ ಜಮೀನನ್ನು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಇದರಲ್ಲಿ ಈಗಾಗಲೇ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯನ್ನು (ಪಿ.ಆರ್.ಆರ್-2) ಅನುಮೋದನೆಯಾಗಿರುವ ನಕ್ಷೆಯಂತೆ ನಿರ್ಮಾಣ ಮಾಡಲಾಗುತ್ತಿದ್ದು, ಮುಖ್ಯ ಸಂಪರ್ಕ ರಸ್ತೆಗೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಉದ್ದೇಶಿತ 100.00 ಮೀ ಅಗಲದಲ್ಲಿ 06 ಪಥಗಳ 3.00 ಮೀ ಮೀಡಿಯನ್ ಒಳಗೊಂಡ 10.00 ಮೀ ಅಗಲದ 2 ಮುಖ್ಯ ರಸ್ತೆ ಹಾಗೂ ರಸ್ತೆ ಇಕ್ಕೆಲಗಳಲ್ಲಿ ಎರಡು Buolevard ಜಾಗಗಳನ್ನು ಹೊರತುಪಡಿಸಿ 02 ಪಥಗಳ 9.00 ಮೀಟರ್ ಅಗಲಕ್ಕೆ ಎರಡು ಸರ್ವಿಸ್ ರಸ್ತೆಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

ಪ್ರಾಧಿಕಾರವು ಯಾವ ಉದ್ದೇಶಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ.

---

ಸಂಖ್ಯೆ: ನಅಇ 233 ಬೆಂಭೂಸ್ವಾ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ